ಆ) ಪೌರ ಕಾರ್ಮಿಕರ ನೇಮಕಾತಿಯ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಎಸ್.ಆರ್.ಮೋರೆ(ಪೌರಾಡಳಿತ ಹಾಗೂ ಕಯುಐಡಿಎಫ್‌ಸಿ ಸಚಿವರು) :

ಅ) ಗೊತ್ತಿದೆ.

ಆ) ನಗರಸಭೆಗಳಿಗೆ ಸಂಬಂಧಿಸಿದಂತೆ ಒಟ್ಟು ಹುದ್ದೆಗಳಲ್ಲಿ ಶೇಕಡ 50 ರಷ್ಟನ್ನು ಔಟ್ ಸೋರ್ಸ್ ಆಗಿ ಕಂಟ್ರಾಕ್ಟರ್ ಮುಖಾಂತರ ನೇಮಿಸಲು ಅವಕಾಶವಿದೆ. ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿನ ಪೌರಕಾರ್ಮಿಕರ ಖಾಲಿ ಹುದ್ದೆಗಳನ್ನು ನಗರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸಂಪನ್ಮೂಲ ಲಭ್ಯತೆಗೊಳಪಟ್ಟು ಭರ್ತಿ ಮಾಡಿಕೊಳ್ಳಲು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

292(890) ಶ್ರೀ ನಿಂಗಪ್ಪ.ಹೆಚ್(ಕುಣಿಗಲ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುಮಕೂರಿನಿಂದ ಕುಣಿಗಲ್ ವರೆಗಿನ ಹೇಮಾವತಿ ನಾಲಾ ಮಾರ್ಗದ ಕೆಲಸ ಪೂರ್ಣಗೊಳ್ಳಲು ಸರ್ಕಾರ ಗಮನ ಹರಿಸಿದೆಯೇ ;

ಆ) ಹಾಗಿದ್ದಲ್ಲಿ, ಯಾವ ಅವಧಿಯಲ್ಲಿ ಕೆಲಸ ಪೂರೈಸಿ ಕುಣಿಗಲ್ ಕೆರೆಗೆ ಸರಾಗವಾಗಿ ನೀರು ಹರಿಯಲು ಕ್ರಮ ಕೈಗೊಳ್ಳಲಾಗುತ್ತದೆ ;

ಇ) ಹೇಮಾವತಿ ಅಣೆಕಟ್ಟಿನಿಂದ ನೀರು ಬಿಡುವ ಸಂದರ್ಭದಲ್ಲಿ ಕೊನೆಯ ಹಂತದಲ್ಲಿರುವ ಕುಣಿಗಲ್ ಕೆರೆಗೆ ಮೊದಲು ನೀರು ತುಂಬಿಸಲು "ವಿಶ್ವೇಶ್ವರಯ್ಯ ನಾಲಾ ಪದ್ಧತಿ" ಅನ್ವಯ ಸರ್ಕಾರ ಕ್ರಮ ಕೈಗೊಳ್ಳಲಿದೆಯೇ ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಕುಣಿಗಲ್‌ವರೆಗಿನ ಕಾಮಗಾರಿಗಳನ್ನು ಪೂರ್ಣಗೊಳಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗಿದೆ.

ಆ) ತುಮಕೂರು ಶಾಖಾ ನಾಲೆಯ ಕಿ.ಮೀ.124 ರಿಂದ 187ರವರೆಗೆ ಅಗೆತದ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದೆ. ಸದರಿ ರೀಚ್‌ನಲ್ಲಿ ವಿಷಮಾವಸ್ಥೆಯಲ್ಲಿರುವ 35 ಕಿ.ಮೀ.ಗಳನ್ನು ಗುರುತ್ತಿಸಿದ್ದು, ಅವುಗಳಿಗೆ ಸಿ.ಸಿ.ಲೈನಿಂಗ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಈ ಪೈಕಿ 4 ಕಿ.ಮೀ.ಕಾಮಗಾರಿಗಳು ಪೂರ್ಣಗೊಂಡಿದ್ದು, 3 ಕಿ.ಮೀ.ಕಾಮಗಾರಿಗಳ ಪ್ರಗತಿಯಲ್ಲಿರುತ್ತದೆ ಉಳಿದಂತೆ 28 ಕಿ.ಮೀ.ಲೈನಿಂಗ್ ಕಾಮಗಾರಿಗಳಿಗೆ ಒಟ್ಟು ರೂ 23.27 ಕೋಟಿಗಳಿಗೆ ಅಂದಾಜು ಮಾಡಲಾಗಿದ್ದು. ಪ್ರಸಕ್ತ ಸಾಲಿನಲ್ಲಿ ರೂ. 5.86 ಕೋಟಿಗಳ ಅನುದಾನವನ್ನು ಒದಗಿಸಿದೆ.

ಇ) ನೀರಾವರಿ ಸಲಹಾ ಸಮಿತಿಯ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಣಯದಂತೆ ನೀರನ್ನು ಹರಿಸಲಾಗುತ್ತಿದೆ.

293(597) ಶ್ರೀ ನಿರ್ಮಲ್ ಸುರಾನಾ ಎಂಎಲ್‌ಎ(ಭಾರತಿನಗರ) ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯನ್ನು ಯಾವುದೇ ಮುನ್ಸೂಚನೆ ಮತ್ತು ಕಾರಣವಿಲ್ಲದೆ ವರ್ಷವಿಡಿ ವರ್ಗಾವಣೆ ಮಾಡುತ್ತಿರುವುದು ಸರಿಯೇ;

ಆ) ಈ ರೀತಿಯ ವರ್ಗಾವಣೆ/ಸ್ಥಾನಪಲ್ಲಟ ಮಾಡುವ ಮೊದಲು ಆಯಾ ಕ್ಷೇತ್ರದ ಶಾಸಕರ ಅಭಿಪ್ರಾಯ/ಗಮನಕ್ಕೆ ತರದೆ ಮನಸೊ ಇಚ್ಚವರ್ಗಾವಣೆ ಮಾಡುವುದು ಆಯಾ ಕ್ಷೇತ್ರ ಶಾಸಕರನ್ನು ಕಡೆಗಣಿಸಿದಂತಾಗುವುದಿಲ್ಲವೆ;

ಇ) ಬೆಂಗಳೂರು ಮಹಾನಗರ ಪಾಲಿಕೆ ವರ್ಗಾವಣೆ ನೀತಿಯಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಳ್ಳುವುದನ್ನು ಸರ್ಕಾರ ನಿಯಂತ್ರಿಸುವುದೆ ?

ಶ್ರೀ ಎನ್.ಧರ್ಮಸಿಂಗ್(ಮುಖ್ಯ ಮಂತ್ರಿಯವರು) :

ಅ) ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯನ್ನು ಯಾವುದೇ ಕಾರಣ ವಿಲ್ಲದೆ ವರ್ಗಾವಣೆ ಮಾಡುತ್ತಿಲ್ಲ. ಹಾಗೂ ವಿನಾಕಾರಣ ಯಾವುದೇ ವರ್ಗಾವಣೆ ಮಾಡಿರುವುದಿಲ್ಲ. ಹಾಗೂ ವರ್ಗಾವಣೆ ಮುನ್ಸೂಚನೆ ಅಗತ್ಯವಿರುವುದಿಲ್ಲ.

ಆ) ವರ್ಗಾವಣೆ ಆಡಳಿತಾತ್ಮಕ ಕಾರಣಗಳಿಂದ ಮಾಡಲಾಗುತ್ತಿದೆ ವರ್ಗಾವಣೆ ಮಾಡುವ ಸಂದರ್ಭದಲ್ಲಿ ಕೌನ್ಸಿಲರ್ ಮತ್ತು ಶಾಸಕರ ಸಲಹೆಯನ್ನು ಸಹ ಗಮನಕ್ಕೆ ತೆಗೆದುಕೊಳ್ಳಲಾಗುತ್ತಿದೆ.

ಇ) ವರ್ಗಾವಣೆಯಿಂದ ಅಭಿವೃದ್ಧಿ ಕಾರ್ಯಗಳ ಪ್ರಗತಿ ಕುಂಠಿತವಾಗುತ್ತಿಲ್ಲ.

294(598) ಶ್ರೀ ನಿರ್ಮಲ್ ಸುರಾನಾ, ಎಂಎಲ್ಎ(ಭಾರತಿನಗರ) ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅಲಸೂರು ಕೆರೆ ಅಭಿವೃದ್ಧಿ ಯೋಜನೆಯಡಿ ಇದುವರೆವಿಗೂ ಕೈಗೊಂಡಿರುವ ನವೀಕರಣ, ವಿಸ್ತರಣೆ, ಅಭಿವೃದ್ಧಿ ಕಾಮಗಾರಿಗಳ(ವಿವರ ನೀಡುವುದು) :

ಆ) ಯೋಜನೆಗೆ 2004–05ನೇ ಡಿಸೆಂಬರ್ ಅಂತ್ಯಕ್ಕೆ ಖರ್ಚು ಮಾಡಿರುವ ಹಣ ಎಷ್ಟು (ಬಾಬ್ತುವಾರು ಖರ್ಚಿನ ವಿವರ ನೀಡುವುದು) ;

ಇ) ಕೆರೆಯ ಆಳ ಎಷ್ಟು, ಎಷ್ಟು ಘನ ಅಡಿ ಹೂಳನ್ನು ತೆಗೆಯಲಾಗಿದೆ: ಹೂಳು ತೆಗೆಯುವ ಪೂರ್ವದಲ್ಲಿ ಎಷ್ಟು ಘನ ಅಡಿ ನೀರು ಶೇಖರಣೆಗೊಳ್ಳುತ್ತಿತ್ತು ; ಹೂಳು ತೆಗೆದ ನಂತರ ಎಷ್ಟು ಘನ ಅಡಿ ನೀರು ಶೇಖರಣೆಯಾಗುತ್ತಿದೆ ;

ಈ) ಕೆರೆಯಲ್ಲಿ ತೆಗೆದ ಹೂಳನ್ನು ಎಲ್ಲಿ ಶೇಖರಣೆ ಮಾಡಲಾಗಿದೆ ಹಾಗೂ ಶೇಖರಣೆ ಮಾಡಿದ ಹೂಳಿನ ಅಳತೆ ಪರಿಮಾಣವೆಷ್ಟು (ಅಂಕಿ ಅಂಶಗಳ ವಿವರವಾದ ದಾಖಲೆ ಒದಗಿಸುವುದು);

ಉ) 2005–06ನೇ ಸಾಲಿನಲ್ಲಿ ಇದರ ನವೀಕರಣ ಮತ್ತು ಸೌಂದರ್ಯಕರಣಕ್ಕೆ ನಿಗದಿಪಡಿಸಿರುವ ಹಣವೆಷ್ಟು (ವಿವರಗಳನ್ನು ಒದಗಿಸುವುದು);

ಊ) ಯಾವ ಯಾವ ಕಾಮಗಾರಿಗಳನ್ನು ನವೀಕರಣ ಶೀರ್ಷಿಕೆಯಡಿಯಲ್ಲಿ ಕೈಗೊಂಡಿದ್ದೀರಿ (ವಿವರ ನೀಡುವುದು)?

ಶ್ರೀ ಎನ್. ಧರ್ಮ ಸಿಂಗ್(ಮಾನ್ಯ ಮುಖ್ಯಮಂತ್ರಿಗಳು) :

1) ಕೆರೆಯ ಹೂಳೆತ್ತುವುದು,
2) ಸೆಡಿಮೆಂಟೇಷನ್ ಟ್ಯಾಂಕ್ ನಿರ್ಮಾಣ
3) ಮೂರ್ತಿಗಳ ವಿಸರ್ಜನೆ ಕೊಳ,
4) ದ್ವೀಪಗಳ ಅಭಿವೃದ್ಧಿ